Address : UNIREG
Telephone No : 2419677/2419361
Fax : 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಸೌಧ**
**ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406**
**ಮೈಸೂರು–570 005**

ಸಂಖ್ಯೆ: ಜಿಎಲ್8/16/2022–23 ದಿನಾಂಕ: 22.08.2022

## ಬಹಿರಂಗ ಹರಾಜು ಪ್ರಕಟಣೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಹಳೆಯ ವಾಹನವನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

*****

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 14.09.2022 ರಂದು ಅಪರಾಹ್ನ 03.30 **ಘಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಕಾರ್‌ಶೆಡ್‌ನ** ಬಳಿ ಈ ಕೆಳಗೆ ನಮೂದಿಸಿರುವ ಹಳೆಯ ವಾಹನವನ್ನು ಯಥಾಸ್ಥಿತಿಯಲ್ಲಿ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ, ಈ ವಾಹನವು **ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಆವರಣದಲ್ಲಿದ್ದು,** ಕಛೇರಿಯ ವೇಳೆಯಲ್ಲಿ ಪರಿಶೀಲಿಸಬಹುದಾಗಿದೆ.

| Vehicle No. | Year of Registration | F.C Up to | EMD |
|---|---|---|---|
| KA-09 N 0401 Qualis | 2001 | November 2026 | 5,000 |

**ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು:**

1. ಅರ್ಜಿ ಶುಲ್ಕ ರೂ. 100/–(ಒಂದು ನೂರು ರೂಪಾಯಿಗಳು ಮಾತ್ರ)
2. ಖಾಲಿ ಅರ್ಜಿ ಫಾರಂಗಳನ್ನು ಪಡೆಯಲು ದಿನಾಂಕ: **25.08.2022** ರಿಂದ **13.09.2022** ಸಂಜೆ **05.00** ಗಂಟೆಯವರೆಗೆ ವಿತರಿಸಲಾಗುತ್ತದೆ.
3. ಭರ್ತಿ ಮಾಡಿದ ಅರ್ಜಿಗಳನ್ನು (ಇ.ಎಂ.ಡಿ. ಸಹಿತ) ಸ್ವೀಕರಿಸಲು ಕೊನೆಯ ದಿನಾಂಕ: **14.09.2022** ಮಧ್ಯಾಹ್ನ **01.00**ಗಂಟೆ.
4. ಬಹಿರಂಗ ಹರಾಜು ದಿನಾಂಕ: **14.09.2022** ಅಪರಾಹ್ನ 03.30 ಗಂಟೆ.
   **ಸೂಚನೆ:– ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ 0821–2419209, 2419286,**

.

**ಸಹಿ/–**
ಕುಲಸಚಿವ

**ಇವರಿಗೆ,**

1. ಸಂಯೋಜನಾಧಿಕಾರಿಗಳು, ಇ–ಪ್ರೊಕ್ಯೂರಮೆಂಟ್ ಘಟಕ, ಮಾನಸಗಂಗೋತ್ರಿ, ಮೈಸೂರು– ಬಹಿರಂಗ ಹರಾಜು ಪ್ರಕಟಣೆಯನ್ನು ವಿಶ್ವವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ.
2. ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕ(ಸಾಮಾನ್ಯ), ಆಡಳಿತಶಾಖೆ, ಮೈವಿವಿ, ಮೈಸೂರು
3. ಹಣಕಾಸು ಅಧಿಕಾರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈವಿವಿ, ಮೈಸೂರು.
5. ಕಛೇರಿ ಸೂಚನಾ ಫಲಕ.
6. ಕಛೇರಿ ಪ್ರತಿ.

## ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು

1. ಬಹಿರಂಗ ಹರಾಜು ಪ್ರಕಟಣೆಯಲ್ಲಿ ನಮೂದಿಸಿರುವ ಹಳೆಯ ವಾಹನವನ್ನು ಯಥಾಸ್ಥಿತಿಯಲ್ಲಿ ಬಹಿರಂಗ ಹರಾಜು ಮಾಡಲಾಗುವುದು.
2. ಖಾಲಿ ಅರ್ಜಿಗಳನ್ನು ವಿತರಿಸುವ ದಿನಾಂಕ: 25.08.2022 ರಿಂದ 13.09.2022 ಸಂಜೆ 05.00 ಗಂಟೆ
3. ಅರ್ಜಿ ಶುಲ್ಕ ರೂ. **100/-** (ಒಂದು ನೂರು ರೂಪಾಯಿಗಳು ಮಾತ್ರ)
4. ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಕಡ್ಡಾಯವಾಗಿ ರೂ. **5000/-** (ಐದು ಸಾವಿರ ರೂಪಾಯಿಗಳು ಮಾತ್ರ)ಗಳ ಇ.ಎಂ.ಡಿ.ಯೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
5. ಭರ್ತಿ ಮಾಡಿದ ಅರ್ಜಿಗಳನ್ನು (ಇ.ಎಂ.ಡಿ. ಸಹಿತ) ಸ್ವೀಕರಿಸಲು ಕೊನೆಯ ದಿನಾಂಕ: 14.09.2022 ಮಧ್ಯಾಹ್ನ 01.00 ಗಂಟೆ.
6. ಇ.ಎಂ.ಡಿ. ಮೊಬಲಗನ್ನು Registrar, University of Mysore, Mysore ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಅರ್ಜಿಯ ಜೊತೆ ಲಗತ್ತಿಸುವುದು. ಇ.ಎಂ.ಡಿ. ಇಲ್ಲದ ಅರ್ಜಿಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸಲಾಗುವುದಿಲ್ಲ.
7. ಯಶಸ್ವಿ ಬಿಡ್‌ದಾರರನ್ನು (ಅತಿ ಹೆಚ್ಚು ಮೊಬಲಗು) ಹೊರತುಪಡಿಸಿ ಉಳಿದ ಬಿಡ್‌ದಾರರಿಗೆ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಇ.ಎಂ.ಡಿ. ಡಿ.ಡಿ. ಹಿಂದಿರುಗಿಸಲಾಗುವುದು.
8. ಯಶಸ್ವಿ ಬಿಡ್‌ದಾರರು ಖಾಯಂ ವಿಳಾಸದ ಆಧಾರ್ ಮತ್ತು ಪಾನ್‌ಕಾರ್ಡ್ ಪ್ರತಿಗಳನ್ನು ಅರ್ಜಿಯ ಜೊತೆ ಲಗತ್ತಿಸತಕ್ಕದ್ದು.
9. ಯಶಸ್ವಿ ಬಿಡ್‌ದಾರರು ವಾಹನ ವಿಮೆ ಮತ್ತು ವರ್ಗಾವಣೆಗೆ ಸಂಬಂಧಿತ ಆರ್.ಟಿ.ಓ. ತೆರಿಗೆ ಇನ್ನಿತರೆ ವೆಚ್ಚಗಳನ್ನು ಸ್ವಂತ ಖರ್ಚಿನಲ್ಲಿ ಪಾವತಿಸಿಕೊಂಡು ನಿಗದಿತ ಸಮಯದೊಳಗೆ ವರ್ಗಾವಣೆ ಮಾಡಿಸಿಕೊಳ್ಳತಕ್ಕದ್ದು, ತಪ್ಪಿದಲ್ಲಿ ನಂತರದ ಅವಗಡಗಳಿಗೆ ತಾವೇ ಜವಾಬ್ದಾರರು.
10. ಯಶಸ್ವಿ ಬಿಡ್‌ದಾರರು ಪೂರ್ಣ ಮೊಬಲಗನ್ನು ಪಾವತಿಸಿ ವಾಹನ ಪಡೆಯತಕ್ಕದ್ದು. ತಪ್ಪಿದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
11. ಯಶಸ್ವಿ ಬಿಡ್ ಮೊಬಲಿಗೆ ಶೇ. 6 ರಷ್ಟು ಜಿ.ಎಸ್.ಟಿ. ಯನ್ನು ಬಿಡ್‌ದಾರರು ಭರಿಸಬೇಕಾಗಿರುತ್ತದೆ.
12. ಹರಾಜು ವಾಹನದ ವಿಮೆಯು ಕರ್ನಾಟಕ ಸರ್ಕಾರಿ ವಿಮೆಯಾಗಿದ್ದು, ವರ್ಗಾವಣೆಗೆ ಅವಕಾಶವಿಲ್ಲದಿರುವುದರಿಂದ, ಯಶಸ್ವಿ ಬಿಡ್‌ದಾರರು ಪ್ರತ್ಯೇಕ ವಿಮೆಯನ್ನು ಸ್ವಂತ ವೆಚ್ಚದಲ್ಲಿ ವಿಮೆ ಮಾಡಿಸಿಕೊಂಡು ವಿಮಾ ಪತ್ರದ ಪ್ರತಿಯನ್ನು ಈ ಕಛೇರಿಗೆ ಒದಗಿಸಿದ ನಂತರ ವಾಹನ ವಿಲೇವಾರಿ ಮಾಡಲಾಗುವುದು.
13. ಬಹಿರಂಗ ಹರಾಜನ್ನು ಯಾವುದೇ ಕಾರಣ ನೀಡದೆ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಥವಾ ರದ್ದುಗೊಳಿಸುವ ಅಧಿಕಾರ ಮೈಸೂರು ವಿಶ್ವವಿದ್ಯಾನಿಲಯದ್ದಾಗಿರುತ್ತದೆ.

ಸಹಿ/-

ಕುಲಸಚಿವ